ಹೋಗೋಣ ಬಾ' ಅಂತಂದ. ಅದು ನನಗೂ ಒಪ್ಪಿಗೆಯಾಯಿತು. ಇಬ್ಬರೂ ಅರ್ಧ ಆಣೆಗೆ ಕಡ್ಲೆಕಾಯಿ ಕೊಂಡುಕೊಂಡು ತಿನ್ನುತ್ತಾ, ಹತ್ತಿರದಲ್ಲೇ ಇದ್ದ ಕುಕ್ಕರಹಳ್ಳಿ ಕೆರೆ ದಿಕ್ಕಿಗೆ ನಡೆದೆವು. ಕೆರೆ ಏರಿ ಮೇಲೆ ಸ್ವಲ್ಪ ದೂರ ನಡೆಯುವಷ್ಟರಲ್ಲಿ ಎದುರುಗಡೆಯಿಂದ ಅರಿಸಿನ ಬಣ್ಣದ ಜೆರ್ಸಿ ಮತ್ತು ಬಿಳಿ ನಿಕ್ಕರ್ ತೊಟ್ಟಿದ್ದ ಫುಟ್‌ಬಾಲ್ ತಂಡವೊಂದು ಚೆಂಡೊಂದನ್ನು ಆ ಕಡೆಯಿಂದ ಈ ಕಡೆಗೆ ಎಸೆದಾಡುತ್ತಾ ಬರುತ್ತಿತ್ತು. ಅವರನ್ನು ನೋಡುತ್ತಿದ್ದ ಹಾಗೆಯೇ ನಮ್ಮಿಬ್ಬರ ಕಣ್ಣುಗಳು ಅಗಲವಾದವು. ನಾವು ನಿಂತಲ್ಲಿಯೇ ನಿಂತೆವು. ಫುಟ್‌ಬಾಲ್ ತಂಡ ಹತ್ತಿರಕ್ಕೆ ಬಂದಿತು. ಅದು ಮಂಡ್ಯ ಜಿಲ್ಲೆಯ ತಂಡವೆಂದು ಆಟಗಾರರು ಹಾಕಿದ್ದ ಜೆರ್ಸಿ ಬರಹದಿಂದ ಗೊತ್ತಾಯಿತು. ಅವರನ್ನೇ ಎವೆಯಿಕ್ಕದೆ ನೋಡುತ್ತಿದ್ದ ನಮ್ಮನ್ನು ಕಂಡು ಅವರ ಪೈಕಿ ಒಬ್ಬ 'ಮ್ಯಾಚಿದೆ ಬನ್ರೊ' ಅಂದ. ಆ ಆಹ್ವಾನವನ್ನು ನಾವಿಬ್ಬರೂ ಮನಃಪೂರ್ವಕವಾಗಿ ಸ್ವೀಕರಿಸಿ, ತಂಡವನ್ನು ನಿಧಾನವಾಗಿ ಹಿಂಬಾಲಿಸಿದೆವು. ಆ ನಡುವೆಯೂ ನಾವು ಕೆರೆಯ ತಡಿಗೆ ಹೋಗಿ, ನೀರಿನಲ್ಲಿ ಕೈಕಾಲು ಆಡಿಸಿ, ಆಮೇಲೆ ಮ್ಯಾಚ್ ನೋಡಲು ಹೋದೆವು. ಇದೊಂದು ಸಾಮಾನ್ಯ ಸಂಗತಿಯೇನೊ ಹೌದು. ಆದರೆ, ನಮಗೆ ಅದಾಗಿರಲಿಲ್ಲ. ಆ ಸಂದರ್ಭವನ್ನು ಶಾಲೆ ತೆರೆದ ಮೇಲೆ ನಾವು ಉಳಿದ ಗೆಳೆಯರಿಗೆ ರೋಚಕ ಕಥೆ ಕಟ್ಟಿ ಏನೊ ಮಹತ್ವವಾದದ್ದೊಂದನ್ನು ನೋಡಿದಂತೆ ಆಡಿದೆವು. ಕಥೆ ಕಟ್ಟುವುದು ಅಂದರೆ ಇದೇ ತಾನೆ? ಇಲ್ಲದ್ದನ್ನು ಸೃಷ್ಟಿಸಿ ಅಥವಾ ಇದ್ದದ್ದನ್ನು ವೈಭವೀಕರಿಸಿ ಹೆಣೆಯುವುದು? ಹಾಗೆ ನೋಡಿದರೆ ಕಥೆಗಾರರೆಂದರೆ ನನ್ನ ಪ್ರಕಾರ ಸುಳ್ಳಿನ ಜನಕರು ಎಂದೇ ಅರ್ಥ. ನೀವೇನನ್ನುತ್ತೀರೊ?

ಗಾದೆಯ ಮಾತೊಂದಿದೆ 'ಎಲ್ಲ ದಿನವೂ ಸೋಮವಾರ ಅಲ್ಲ' ಅಂತ. ಹಾಗಾಯಿತು ಮುಂದಿನ ದಿನಗಳು. ನಾನು ಎಂಟನೆಯ ತರಗತಿಯನ್ನು ಮೊದಲನೆಯ ದರ್ಜೆಯಲ್ಲೇ ಪಾಸು ಮಾಡಿ, ಹಾರ್ಡ್ವಿಕ್ ಹೈಸ್ಕೂಲಿನಲ್ಲಿ ಫಸ್ಟ್ ಇಯರ್ ವಿದ್ಯಾರ್ಥಿಯಾದೆ. ಅಷ್ಟು ಹೊತ್ತಿಗೆ ಸ್ಯಾಮುಯಲ್ ಗುರುದಾಸ್‌ನ ಸಂಪರ್ಕ ಸಾಕಷ್ಟು ಕಡಿಮೆಯಾಗಿತ್ತು. ಆದರೆ, ಫುಟ್‌ಬಾಲ್ ಆಟ ಮಾತ್ರ ಮುಂದುವರೆದಿತ್ತು. ಅದೇ ಹೊತ್ತಿನಲ್ಲಿ ನಮ್ಮ ಮನೆಯ ಪರಿಸ್ಥಿತಿ ಅಯೋಮಯವಾಗಿ ನನ್ನ ತಾಯಿ ಜೀವನಕ್ಕೋಸ್ಕರ ನನ್ನ ತಮ್ಮಂದಿರೊಂದಿಗೆ ತೌರು ದೂರದ ಹೊರೆಯಾಲಕ್ಕೆ ಹೋದರು. ವಿದ್ಯಾರ್ಥಿಯಾಗಿದ್ದ ನಾನು ಮೈಸೂರಿನಲ್ಲೇ ಉಳಿದು ನನ್ನ ತಂದೆ ಹೇಳಿದಂತೆ ಅವರಿವರ ಮನೆಯಲ್ಲಿರುತ್ತಾ, ಅವರು ಕೊಡುತ್ತಿದ್ದ ಪುಡಿಕಾಸಿನಲ್ಲಿ ಹೋಟೆಲ್ಲಿನಲ್ಲಿ ತಿಂದು, ಎಷ್ಟಾಗುತ್ತದೋ ಅಷ್ಟು ಹೊಟ್ಟೆ ತುಂಬಿಸಿಕೊಳ್ಳುತ್ತಾ, ಕಂಡವರ ಪಡಸಾಲೆಯಲ್ಲಿ ಮಲಗುತ್ತಾ, ಸ್ನಾನ ಮಾಡಲು, ಬಟ್ಟೆ ಒಗೆಯಲು ಮತ್ತು ಕೆಲವು ಬಾರಿ ಕುಕ್ಕರಹಳ್ಳಿಯ ಕೆರೆ ಅಂಗಳವನ್ನೇ ಚಾಪೆಯನ್ನಾಗಿ ಮಾಡಿಕೊಂಡು ರಾತ್ರಿ ಹೊತ್ತು ಮಲಗಲು ಅವಲಂಬಿಸಬೇಕಾಯಿತು. ಹೀಗಿರುವಾಗ ಒಮ್ಮೆ ಮಧ್ಯಾಹ್ನದ ಹೊತ್ತಿನಲ್ಲಿ ಕುಕ್ಕರಹಳ್ಳಿ ಕೆರೆಯಲ್ಲಿ ಬಟ್ಟೆ ಒಗೆದು ಮುಗಿದು, ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಕೆರೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ 'ಮೇಟಿ' ನನ್ನಲ್ಲಿಗೆ ಬಂದ. ದುರುಗುಟ್ಟಿ ನೋಡಿದ. ಗದರಿಸಿದ. ನನ್ನ ಕತ್ತಿನ ಪಟ್ಟಿ ಹಿಡಿದುಕೊಂಡು 'ಯಾಕೆ ಬಟ್ಟೆ ಒಗೆದೆ? ಬಟ್ಟೆ ಒಗಿಬಾರದು, ಏರಿ ಮೇಲೆ ಬೈಸಿಕಲ್ ಹೊಡಿಬಾರದು. ಮಾಡಿದರೆ ಹತ್ತು ಪೈಸೆ ದಂಡ ಕಟ್ಟಬೇಕು ಅಂತ ಬೋರ್ಡ್ ಹಾಕಿಲ್ವ? ತತ್ತ' ಅಂತ ನನ್ನನ್ನು ಜಗ್ಗಿದ. ನಾನು ತತ್ತರಬಿತ್ತರನಾದೆ. ಕಣ್ಣುಗಳಿಂದ ಧಾರಾಕಾರ ನೀರು ಹರಿಯತೊಡಗಿತು. ನನ್ನ ಯಾವ ಹೇಳಿಕೆ ಕೇಳಿಕೆಗೂ ಅವನು ಬಗ್ಗಲಿಲ್ಲ. ಏನು ಮಾಡಬೇಕೆಂದು ತೋಚದೆ ಮೇಲೆ ಕೆಳಗೆ ನೋಡುತ್ತಿರುವಾಗ, ಆಗ, ಕೆರೆಯ ಪೂರ್ವಭಾಗದ ಗೇಟಿನ ಬಳಿ ಇರುವ ಆಲದ ಮರದ ಕೆಳಗೆ ಏನನ್ನೋ ಬರೆಯುತ್ತ ಕುಳಿತಿದ್ದ ಒಬ್ಬ ವ್ಯಕ್ತಿಯು ಎದ್ದು ನಮ್ಮ ಬಳಿ ಬಂದು, ಮೇಟಿಯನ್ನು ಕುರಿತು, 'ಪಾಪ, ಚಿಕ್ಕಹುಡುಗ. ಬಿಟ್ಟುಬಿಡು' ಅಂದರು. ಅವರ ಮಾತಿಗೆ ಬೆಲೆ ಕೊಟ್ಟಂತೆ ತೋರಿದ ಮೇಟಿಯು, 'ಇನ್ನೊಂದ್ಸಾರಿ ಬಂದುಗಿಂದೀಯ, ಜೋಕೆ' ಅಂತ ಎಚ್ಚರಿಕೆ ನೀಡಿ, ನನ್ನ ಕತ್ತಿನಪಟ್ಟಿ ಬಿಟ್ಟ. ಹೋದ ಜೀವ

